| ಬೆವಿಕಂ BESCOM | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ) |
|---|---|

| | | |
|---|---|---|
| ದೂರವಾಣಿ | : 080-2234 1199 | ಪ್ರಧಾನ ವ್ಯವಸ್ಥಾಪಕರು (ವಿ), ರವರ ಕಛೇರಿ |
| ಇಮೇಲ್ ಐಡಿ | : gmdsm@bescom.co.in | ಡಿಎಸ್ಎಂ, ಬೆವಿಕಂ, |
| ಲಗತ್ತು | : ಅರ್ಜಿದಾರರ ವಿವರ ಮತ್ತು ಪೂರಕ ಮಾಹಿತಿ | ಕೆ.ಆರ್.ವೃತ್ತ, ಬೆಂಗಳೂರು. |
| ಸಂಖ್ಯೆ | : ಬೆವಿಕಂ/ಬಿಸಿ-51/3584/2015-16/CYS-11 | ದಿನಾಂಕ: 16-08-2019 |

ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ,),
ಕಾ ಮತ್ತು ಪಾ ಉಪ ವಿಭಾಗ,
ಬೆ.ವಿ.ಕಂ.

ಮಾನ್ಯರೇ,

**ವಿಷಯ:** ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಕೆಯ 4ನೇ ಹಂತದ ಯೋಜನೆ ಅನುಷ್ಠಾನದ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 63 ವಿಎಸ್‌ಸಿ 2018 ದಿನಾಂಕ:12.06.2018
2. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆ.ಆರ್.ಇ.ಡಿ/07/ಸೋಲಾರ್-51/SWP/SOG-2/2018/4232, ದಿನಾಂಕ: 14.06.2018
3. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆಆರ್‌ಇಡಿಎಲ್/07/SOG-2/41/2018/4471, ದಿನಾಂಕ: 28.06.2018
4. ಈ ಕಛೇರಿ ಪತ್ರ ಸಂಖ್ಯೆ: ಬೆವಿಕಂ/ಬಿಸಿ-51/3584/2015-16/ಸಿ.ವೈ.ಎಸ್-08, ದಿನಾಂಕ:03.07.2018, ಆನ್‌ಲೈನ್ ಮುಖಾಂತರ ಅರ್ಜಿ ನೋಂದಾವಣಿ
5. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆಆರ್‌ಇಡಿಎಲ್/07/SOG-2/51/2019/334-36, ದಿನಾಂಕ:18.01.2019
6. ಈ ಕಛೇರಿ ಪತ್ರ ಸಂಖ್ಯೆ: ಬೆವಿಕಂ/ಬಿಸಿ-51/3584/2015-16/ಸಿ.ವೈ.ಎಸ್-30, ದಿನಾಂಕ:11.02.2019, ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿನ ಸ್ಪಷ್ಟೀಕರಣ
7. ಕೆ.ಆರ್.ಇ.ಡಿ.ಎಲ್ ವತಿಯಿಂದ 4ನೇ ಹಂತದ ಅರ್ಜಿ ಆಹ್ವಾನದ ಪತ್ರಿಕಾ ಜಾಹಿರಾತು ದಿನಾಂಕ:21.07.2019
8. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆಆರ್‌ಇಡಿಎಲ್/07/SOG-2/51/2019/3614-19, ದಿನಾಂಕ: 26.07.2019
9. ನಿರ್ದೇಶಕರು(ತಾಂತ್ರಿಕ), ಬೆವಿಕಂ ರವರ ಅನುಮೋದನೆ ದಿನಾಂಕ:14.08.2019

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆ.ಆರ್.ಇ.ಡಿ.ಎಲ್.) ಮೂಲಕ ರೈತರ ಕಲ್ಯಾಣಕ್ಕಾಗಿ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸುವ 2ನೇ ಮತ್ತು 3ನೇ ಹಂತದ ಯೋಜನೆಯು ಮುಕ್ತಾಯ ಹಂತದಲ್ಲಿರುವ ಹಾಗೂ 4ನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಈ ಕೆಳಕಂಡಂತೆ ಉಲ್ಲೇಖ (8) ಪತ್ರದಲ್ಲಿ ತಿಳಿಸಿರುತ್ತಾರೆ:

- ಒಟ್ಟು 261 ಅರ್ಜಿಗಳಿಗಾಗಿ ಆನ್‌ಲೈನ್ ಮುಖಾಂತರ ದಿನಾಂಕ:24.07.2019 ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈಗಾಗಲೇ 63 ಸಂಖ್ಯೆ ಪರಿಶಿಷ್ಟ ಜಾತಿ, 23 ಸಂಖ್ಯೆ ಪರಿಶಿಷ್ಟ ವರ್ಗ, 22 ಸಂಖ್ಯೆಯ ಸಾಮಾನ್ಯ ವರ್ಗಗಳಲ್ಲಿ ಅರ್ಜಿಗಳು ನೊಂದಾವಣಿಯಾಗಿದ್ದು, ಅರ್ಜಿದಾರರ ವಿವರಗಳನ್ನು ಈ ಪತ್ರದೊಂದಿಗೆ ಮಾಹಿತಿಗಾಗಿ ಲಗತ್ತಿಸಲಾಗಿದೆ.

- ಸರ್ಕಾರಿ ಆದೇಶದನ್ವಯ, ವಿಕಲಚೇತನ ವರ್ಗದವರಿಗೆ ಶೇ.5 ರಷ್ಟು ಸಾಮಾನ್ಯ ವರ್ಗದಲ್ಲಿ ಹಾಗೂ ಪ.ಜಾ/ಪ.ಪಂ ವರ್ಗದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ವಿಕಲಚೇತನ ಸಾಮಾನ್ಯ ವರ್ಗದವರು ಇತರೆ ಸಾಮಾನ್ಯ ವರ್ಗದವರಂತೆ ಅರ್ಜಿದಾರರ ವಂತಿಗೆ ರೂ.1 ಲಕ್ಷ ಭರಿಸಬೇಕಾಗಿರುತ್ತದೆ ಹಾಗೂ ವಿಕಲಚೇತನ ಪ.ಜಾ/ಪ.ಪಂ ವರ್ಗದವರಿಗೆ ಉಚಿತ.

- ಗಂಗಾ ಕಲ್ಯಾಣ ಯೋಜನೆಯಡಿ ರೈತರ ಪಂಪ್‌ಸೆಟ್ ಸ್ಥಾವರಗಳಿಗೆ ಬೆವಿಕಂನಿಂದ ವಿದ್ಯುತ್ ಸಂಪರ್ಕ ಪಡೆದಿದ್ದು, ಅನುಮೋದನೆಯಾಗಿ ವಿದ್ಯುತ್ ಸಂಪರ್ಕ ಪಡೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್ ಯೋಜನೆಯಡಿ ಅರ್ಜಿ ನೋಂದಾಯಿಸಿಕೊಂಡಂತಹ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿಲ್ಲವೆಂದು ಈಗಾಗಲೇ ತಿಳಿಸಲಾಗಿದ್ದು, ಈ ನಿಟ್ಟಿನಲ್ಲಿ ಬೆವಿಕಂನಿಂದ ಉಲ್ಲೇಖ(6) ರನ್ವಯ ನಿರ್ದೇಶನ ನೀಡಲಾಗಿರುತ್ತದೆ.

- ಎಂ.ಎನ್.ಆರ್.ಇ ರವರಿಂದ ಅನುಮೋದಿತ ಸೌರ ಪಂಪ್‌ಸೆಟ್ ಯೋಜನೆಯನ್ನು ದಿನಾಂಕ:09.11.2019 ರೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ.
- ಅರ್ಜಿದಾರರು ಆನ್‌ಲೈನ್ ಅರ್ಜಿ ನೋಂದಣಿಮಾಡಿಕೊಂಡ ನಂತರ acknowledgement copy ಯೊಂದಿಗೆ ನಿಗದಿತ ದಾಖಲಾತಿಗಳನ್ನು (ಸ್ವಯಂ ದೃಢೀಕೃತ ಪ್ರತಿಗಳೊಂದಿಗೆ) ಸಂಬಂಧಿಸಿದ ಉಪವಿಭಾಗಗಳಲ್ಲಿ ಸಲ್ಲಿಸಬೇಕಾಗಿರುತ್ತದೆ.
- ಎಲ್ಲಾ ಉಪವಿಭಾಗಾಧಿಕಾರಿಗಳು ಅರ್ಜಿದಾರರು ಸಲ್ಲಿಸುವ ಈ ಕೆಳಕಂಡ ದಾಖಲಾತಿಗಳನ್ನು ಕೂಲಂಕುಷವಾಗಿ ತಪ್ಪದೇ ಪರಿಶೀಲಿಸುವುದು.
  - ಸಾಮಾನ್ಯ ವರ್ಗ : ಆಧಾರ್ ಕಾರ್ಡ್ ಪ್ರತಿ, ಆರ್.ಟಿ.ಸಿ, ಜಲ ಇಳುವರಿ ಪತ್ರ
  - ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗ : ಆಧಾರ್ ಕಾರ್ಡ್, ಆರ್.ಟಿ.ಸಿ, ಜಲ ಇಳುವರಿ ಪತ್ರ, ಜಾತಿ ಪ್ರಮಾಣ ಪತ್ರ (RD ಸಂಖ್ಯೆ ಒಳಗೊಂಡಂತೆ) ಮತ್ತು ಪಡಿತರ ಚೀಟಿ (ರೇಷನ್ ಕಾರ್ಡ್) ಪ್ರತಿಗಳು
  - ವಿಕಲಚೇತನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗ : ಆಧಾರ್ ಕಾರ್ಡ್, ಆರ್.ಟಿ.ಸಿ, ಜಲ ಇಳುವರಿ ಪತ್ರ, ವಿಕಲಚೇತನ ದೃಢೀಕೃತ ಪತ್ರ, ಜಾತಿ ಪ್ರಮಾಣ ಪತ್ರ (RD ಸಂಖ್ಯೆ ಒಳಗೊಂಡಂತೆ) ಮತ್ತು ಪಡಿತರ ಚೀಟಿ (ರೇಷನ್ ಕಾರ್ಡ್) ಪ್ರತಿಗಳು

ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ನಂತರ, ಸಂಬಂಧಪಟ್ಟ ಸ.ಕಾ.ಇಂ, ಉಪವಿಭಾಗರವರು ಆನ್‌ಲೈನ್ ನೋಂದಾಯಿತ ಅರ್ಜಿದಾರರ acknowledgement copy, ಇತರೆ ದಾಖಲೆಗಳು ಹಾಗೂ ಮೂಲ ಡಿಡಿಯೊಂದಿಗೆ ಕೆ.ಆರ್.ಇ.ಡಿ.ಎಲ್. ಕಛೇರಿಗೆ ಅಥವಾ ಪ್ರಧಾನ ವ್ಯವಸ್ಥಾಪಕರು(ವಿ), ಡಿ.ಎಸ್.ಎಂ. ಶಾಖೆ, ನಿಗಮ ಕಾರ್ಯಾಲಯ, ಬೆವಿಕಂ ರವರಿಗೆ ವಿಳಂಬ ಮಾಡದೇ ಶೀಘ್ರವಾಗಿ ಕಳುಹಿಸಿಕೊಡಲು ಹಾಗೂ ಉಲ್ಲೇಖ(4&6) ರಲ್ಲಿ ತಿಳಿಸಿರುವ ಮಾನದಂಡಗಳನ್ನು ತಪ್ಪದೇ ಪರಿಪಾಲಿಸಲು ಈ ಮೂಲಕ ಸೂಚಿಸಲು ನಿರ್ದೇಶಿತನಾಗಿದ್ದೇನೆ.

ಕೆ.ಆರ್.ಇ.ಡಿ.ಎಲ್ ಇಲಾಖೆಯಿಂದ ಹೊರಡಿಸಲಾಗಿರುವ ಜಾಲಮುಕ್ತ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಯೋಜನೆಯ ಪೂರಕ ಮಾಹಿತಿ ಮತ್ತು ಮಾರ್ಗಸೂಚಿಗಳನ್ನು ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

16/8/19

**ಪ್ರಧಾನ ವ್ಯವಸ್ಥಾಪಕರು(ವಿ),**
**ಡಿ.ಎಸ್.ಎಂ, ಬೆವಿಕಂ.**

**ಪ್ರತಿಗಳು ದಯಾಪರ ಮಾಹಿತಿಗಾಗಿ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಪ್ರಾಧಿಕಾರ, #39, "ಶಾಂತಿ ಗೃಹ" ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕಟ್ಟಡ, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಛೇರಿ ಎದುರು, ಅರಮನೆ ರಸ್ತೆ, ಬೆಂಗಳೂರು–560001.

**ಪ್ರತಿಗಳು ಮಾಹಿತಿಗಾಗಿ:**

2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಕಾರ್ಯಾಚರಣೆ, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ&ಪಾ ವಲಯ, ಬೆವಿಕಂ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಬೆವಿಕಂ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವಿಭಾಗ, ಬೆವಿಕಂ ಅಗತ್ಯ ಕ್ರಮಕ್ಕಾಗಿ.
6. ವ್ಯ.ನಿ/ನಿ(ತಾಂ) ರವರ ಆಪ್ತ ಕಾರ್ಯದರ್ಶಿ, ಬೆವಿಕಂ ರವರು ವ್ಯ.ನಿ/ನಿ(ತಾಂ), ಬೆವಿಕಂ ರವರ ಗಮನಕ್ಕೆ ತರಲು ಕೋರಿದೆ.
7. ಕಛೇರಿ ಪ್ರತಿ/ಮುಖ್ಯ ಕಡತ.